1

Starred
24-03-2021

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	2946
ಸದಸ್ಯರ ಹೆಸರು	ಶ್ರೀ ಶ್ರೀನಿವಾಸ್. ಎಂ. (ಮಂಡ್ಯ)
ಉತ್ತರಿಸಬೇಕಾದ ದಿನಾಂಕ	24.03.2021

ಕ್ರಸಂ | ಪ್ರಶ್ನೆಗಳು | ಉತ್ತರ

ಅ. ಪ್ರಶ್ನೆ: ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಬಾರ್ಡ್ ವತಿಯಿಂದ ವಿವಿಧ ಕಾಮಗಾರಿಗಳಿಗೆ ವರ್ಷವಾರು ಅನುದಾನವು ಮಂಜೂರಾಗಿದೆಯೇ;

ಉತ್ತರ: ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ **ನಬಾರ್ಡ್ ವತಿಯಿಂದ** ವಿವಿಧ ಕಾಮಗಾರಿಗಳಿಗೆ ಮಂಜೂರಾದ ಅನುದಾನದ ವಿವರ ಈ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಕ್ರ. ಸಂ	ವರ್ಷ	5054 ನಬಾರ್ಡ್ ರಸ್ತೆ		4702 ನಬಾರ್ಡ್ ಕೆರೆ		5054 ನಬಾರ್ಡ್ ಕಟ್ಟಡ	
		ಕಾಮಗಾರಿ ಸಂಖ್ಯೆ	ಮೊತ್ತ	ಕಾಮಗಾರಿ ಸಂಖ್ಯೆ	ಮೊತ್ತ	ಕಾಮಗಾರಿ ಸಂಖ್ಯೆ	ಮೊತ್ತ
1	2017-18	3	260.00	3	130.00	6	299.70
2	2018-19	12	1328.50	0	0.00	14	275.7
3	2019-20	0	0.00	0	0.00	0	0.00
	ಒಟ್ಟು	15	1588.50	3	130.00	20	575.40

ವಿವರ **ಅನುಬಂಧ-1**ರಲ್ಲಿ ನೀಡಿದೆ.

ಆ. ಪ್ರಶ್ನೆ: ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು)

ಉತ್ತರ: ಕಳೆದ ಮೂರು ವರ್ಷಗಳಲ್ಲಿ ನಬಾರ್ಡ್ ಯೋಜನೆಯಡಿ ರೂ.1588.50ಲಕ್ಷಗಳ ಅಂದಾಜು ಮೊತ್ತದಲ್ಲಿ 15 ರಸ್ತೆ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. ವಿಧಾನಸಭಾ ಕ್ಷೇತ್ರವಾರು ವಿವರವನ್ನು **ಅನುಬಂಧ-2**ರಲ್ಲಿ ನೀಡಿದೆ.

ಇ. ಪ್ರಶ್ನೆ: ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಿಂದ ನಬಾರ್ಡ್ ಕಾಮಗಾರಿಗಳ ಮಂಜೂರಾತಿಗಾಗಿ ಬಂದಿರುವ ಪ್ರಸ್ತಾವನೆಗಳ ಎಷ್ಟು? (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು)

ಉತ್ತರ: ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ಮಂಜೂರಾತಿಗಾಗಿ ಒಟ್ಟು 31 ಪ್ರಸ್ತಾವನೆಗಳು ಸ್ವೀಕೃತಿಯಾಗಿವೆ.

ರೂ. ಲಕ್ಷಗಳಲ್ಲಿ

ಕ್ರ. ಸಂ	ಸ್ವೀಕೃತವಾದ ಪ್ರಸ್ತಾವನೆಗಳು		ಮಂಜೂರಾದ ಕಾಮಗಾರಿಗಳು		ಬಾಕಿ ಇರುವ ಕಾಮಗಾರಿಗಳು	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	31	2983.50	15	1588.50	16	1395.00

ವಿವರವನ್ನು **ಅನುಬಂಧ-3**ರಲ್ಲಿ ನೀಡಿದೆ.

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/34:ಆರ್ಆರ್ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಅನುಬಂಧ-3

ಅನುಬಂಧ- .

ವಿಧಾನ ಸಭೆ ಸದಸ್ಯರಾದ ಶ್ರೀ ಶ್ರೀನಿವಾಸ್ ಎಂ (ಮಂಡ್ಯ) ರವರ ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ: 2946ಕ್ಕೆ ವಿವರ

ಕಳೆದ 3 ವರ್ಷಗಳಲ್ಲಿ ನಬಾರ್ಡ್ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸ್ವೀಕೃತಿಯಾದ ಪ್ರಸ್ತಾವನೆಗಳ ವಿವರ

Sl. No.	District	Constituency	Name of works`	Amount (Rs.in lakhs)	Remarks
2017-18ನೇ ಸಾಲಿನಲ್ಲಿ ಪ್ರಸ್ತಾಪಿಸಲಾದ ಕಾಮಗಾರಿಗಳ ವಿವರ (ನಬಾರ್ಡ್-23)					
1	Mandya	K.R.Pete	Improvements to road from Akkihebalu Somanahalli main road to K.R.Pete Taluk Boundry via Ipanahalli	50.00	DPR Proposed but not sanctioned
2			Improvements to road from K.R.Pete Bookinakere main road to B.Bachahalli	50.00	DPR Proposed but not sanctioned
3	Mandya	Maddur	Improvement to road from Sompura to Upparadoddi via Gurudevarahally village.	100.00	DPR Proposed and sanctioned
4	Mandya	Maddur	Improvement to join road from MGM road to Honnaikanahalli via Puttegowdanadoddi	150.00	DPR Proposed but not sanctioned
5	Mandya	Maddur	Construction of Bridge across Halla in Edigaradoddi-Adaganahalli road	50.00	DPR Proposed but not sanctioned
6	Mandya	Maddur	Construction of Bridge at Kestur Taggahalli road to Basawalingadadoddi in Yadanahalli road	50.00	DPR Proposed but not sanctioned
7	Mandya	Malavalli	Construction of Bridge & Improvements to road from Banagahalli to Huskur road	125.00	DPR Proposed in 2017-18 and approved in the year 2018-19
8	Mandya	Malavalli	Improvements to road from Kilara village to Siddeshwara Mahadeshwara temple via Honagallimatha SC road		DPR Proposed but not sanctioned
9	Mandya	Mandya	Improvements to road from Thubakere to Keelara	100.00	DPR Proposed but not sanctioned
10	Mandya	Melukote	Improvements to road from Hosayelekere to shamboonahally via Damadahally	100.00	DPR Proposed in 2017-18 and approved in the year 2018-19
11	Mandya	Melukote	Improvements to join road from Kennal Circle to V.V.Nagara village	100	DPR Proposed but not sanctioned
12	Mandya	Nagamangala	Improvements to road from Thattahalli Gate to Dhumjakkanahalli via Dandiganahalli Hullenahalli	100.00	DPR Proposed in 2017-18 and approved in the year 2018-19
13	Mandya	Srirangapatna	Improvements to road from B.Yaralli to Kagehalladadoddi	100.00	DPR Proposed but not sanctioned
14	Mandya	Mandya	Improvements to join road from Nandalli to Harakdahalli in Mandya Taluk	100.00	DPR Proposed in 2017-18 and approved in the year 2018-19
15	Mandya	Nagamangala	Improvements to road from Tattahally village Dandiganhalli via Dammasandrahalli in Nagamangala	100.00	DPR Proposed but not sanctioned
16	Mandya	Srirangapatna	Improvements to road from Neralekere road to Kalakere	50.00	DPR Proposed but not sanctioned
17	Mandya	Srirangapatna	Improvements to road from Gowdalli to join T.M.Hosur MDR road in Srirangapatna Taluk	50.00	DPR Proposed but not sanctioned
18	Mandya	Malavalli	Improvements to road from Chikkamalligekoppalu village to Honaganahalli village road from 0.00km Malavalli Taluk	80.00	DPR Proposed in 2017-18 and approved in the year 2018-19

Sl. No.	District	Constituency	Name of works`	Amount (Rs.in lakhs)	Remarks
19	Mandya	Melukote	Improvements to road from SC road (SH7) to Hasanapura road in Pandavapura Taluk	80.00	DPR Proposed in 2017-18 and approved in the year 2018-19
20	Mandya	Maddur	Improvements to road from K.Bellur SC Colony to R.H.Road via Banahally and Arakaldoddi in Maddur Taluk ch.0.00 to 1.89 km	100.00	DPR Proposed in 2017-18 and approved in the year 2018-19
21	Mandya	Melukote	Improvements to road from Tumbakere to Pandavapura Taluk	100.00	DPR Proposed but not sanctioned
2018–19ನೇ ಸಾಲಿನಲ್ಲಿ ಪ್ರಸ್ತಾಪಿಸಲಾದ ಕಾಮಗಾರಿಗಳ ವಿವರ (ನಬಾರ್ಡ್–24)					
1	ಮಂಡ್ಯ	ಮದ್ದೂರು	ಕೆ.ಕೆ. ರಸ್ತೆಯಿಂದ ಚಾಮಲಾಪುರ ದೊಡ್ಡಿ ಬೆಟ್ಟದಾಸನದೊಡ್ಡಿ ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ	200.00	DPR Proposed and sanctioned
2	ಮಂಡ್ಯ	ನಾಗಮಂಗಲ	ಲಕ್ಕೇಗೌಡನಕೊಪ್ಪಲು ನಿಂದ ದೊಂದೇಮಾದಹಳ್ಳಿ ಕೊಂಬಿನಕೊಪ್ಪಲು ರಸ್ತೆ ಅಭಿವೃದ್ಧಿ ಕಾಮಗಾರಿ.	200.00	DPR Proposed and sanctioned
3	ಮಂಡ್ಯ	ಮೇಲುಕೋಟೆ	ಹೊಸಸಾಯಪ್ಪನಹಳ್ಳಿ ಯಿಂದ ಹಳೇ ಸಾಯಪ್ಪನಹಳ್ಳಿ ಸುಂಡಹಳ್ಳಿ ಮಾರ್ಗವಾಗಿ ರಸ್ತೆ ಅಭಿವೃದ್ಧಿ	100.00	DPR Proposed and sanctioned
4	ಮಂಡ್ಯ	ಮೇಲುಕೋಟೆ	ಎಸ್.ಹೆಚ್.–07 ರಸ್ತೆಯಿಂದ ಹುಲ್ಕೆರೆ ಕೊಪ್ಪಲು ರಸ್ತೆ ಅಭಿವೃದ್ಧಿ ಕಾಮಗಾರಿ.	100.00	DPR Proposed and sanctioned
5	ಮಂಡ್ಯ	ಶ್ರೀರಂಗಪಟ್ಟಣ	ಗೌಡಹಳ್ಳಿ ಯಿಂದ ಟಿ.ಎಂ.ಹೊಸೂರು ರಸ್ತೆ ಅಭಿವೃದ್ಧಿ	48.50	DPR Proposed and sanctioned
6	ಮಂಡ್ಯ	ಶ್ರೀರಂಗಪಟ್ಟಣ	ಅರಕೆರೆ ಯಿಂದ ವಡೆಯಾಂಡಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ.	100.00	DPR Proposed and sanctioned
7	ಮಂಡ್ಯ	ಶ್ರೀರಂಗಪಟ್ಟಣ	ಚನ್ನಹಳ್ಳಿ ಫೀಲ್ಡ್ ರಸ್ತೆ ಅಭಿವೃದ್ಧಿ ಕಾಮಗಾರಿ	100.00	DPR Proposed and sanctioned
8	ಮಂಡ್ಯ	ಮಳವಳ್ಳಿ	ನಂಜಾಪುರದಿಂದ ಮಾದಹಳ್ಳಿ ಕೂಡು ರಸ್ತೆ ಮುಖಾಂತರ ಗೊಲ್ಲರಹಳ್ಳಿಗೆ ಸೇರುವ ರಸ್ತೆ ಅಭಿವೃದ್ಧಿ ಹಾಗೂ ಸೇತುವೆ ಅಭಿವೃದ್ಧಿ ಕಾಮಗಾರಿ	200.00	DPR Proposed but not sanctioned
			ಒಟ್ಟು	1048.50	
2019–20ನೇ ಸಾಲಿನಲ್ಲಿ ಪ್ರಸ್ತಾಪಿಸಲಾದ ಕಾಮಗಾರಿಗಳ ವಿವರ (ನಬಾರ್ಡ್–25)					
1	Mandya	Melukote	Improvements to road from Neelanahalli to join Lakshmisagara Shanimahatma temple in Pandavapura Taluk	100.00	DPR Proposed but not sanctioned
2	Mandya	Melukote	Improvements to road from Gujagonahalli to join Pagade Kallahalli in Pandavapura Taluk	100.00	DPR Proposed but not sanctioned

ಅನುಬಂಧ-1

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.

ಶ್ರೀ.ಶ್ರೀನಿವಾಸ್.ಎಂ.(ಮಂಡ್ಯ) ವಿಧಾನಸಭಾ ಸದಸ್ಯರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2946ಕ್ಕೆ ಉತ್ತರಗಳು

ಅನುಬಂಧ- 1

ಕಳೆದ ಮೂರು ವರ್ಷಗಳಲ್ಲಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ವ್ಯಾಪ್ತಿಗೆ ನಬಾರ್ಡ್ ವತಿಯಿಂದ ವಿವಿಧ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನ ಹಾಗೂ ಕಾಮಗಾರಿಗಳ ವಿವರದ ಘೋಷ್ವಾರೆ.

ಕ್ರ.ಸಂ	ಸಾಲು	ವಿಧಾನಸಭಾ ಕ್ಷೇತ್ರ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಷರಾ
	ನಬಾರ್ಡ್ ಮಾಲಿಕೆ-23 ರಸ್ತೆಗಳು				
1	2017-18	ಮದ್ದೂರು	100.00	1	
2	2017-18	ಮಳವಳ್ಳಿ	80.00	1	
3	2017-18	ಮೇಲುಕೋಟೆ	80.00	1	
		ಒಟ್ಟು	260.00	3	
	ನಬಾರ್ಡ್ ಮಾಲಿಕೆ-22 ಕೆರೆಗಳು				
1	2017-18	ಮಳವಳ್ಳಿ	50.00	1	
2	2017-18	ಕೆ.ಆರ್.ಪೇಟೆ	50.00	1	
3	2017-18	ಶ್ರೀರಂಗಪಟ್ಟಣ	30.00	1	
		ಒಟ್ಟು	130.00	3	
	ನಬಾರ್ಡ್ ಮಾಲಿಕೆ-22ರ ಪಿ.ಯು.ಕಟ್ಟಡಗಳು				
1	2017-18	ಮಂಡ್ಯ	99.90	2	
2	2017-18	ಮದ್ದೂರು	49.95	1	
3	2017-18	ಮಳವಳ್ಳಿ	49.95	1	
4	2017-18	ನಾಗಮಂಗಲ	49.95	1	
5	2017-18	ಶ್ರೀರಂಗಪಟ್ಟಣ	49.95	1	
		ಒಟ್ಟು	299.70	6	

ಕ್ರ.ಸಂ	ಸಾಲು	ವಿಧಾನಸಭಾ ಕ್ಷೇತ್ರ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಷರಾ
		ನಬಾರ್ಡ್ ಮಾಲಿಕೆ-24ರ ರಸ್ತೆಗಳು			
1	2018-19	ಮದ್ದೂರು	300.00	2	
2	2018-19	ಮಳವಳ್ಳಿ	100.00	1	
3	2018-19	ನಾಗಮಂಗಲ	300.00	2	
4	2018-19	ಮೇಲುಕೋಟೆ	300.00	3	
5	2018-19	ಮಂಡ್ಯ	80.00	1	
6	2018-19	ಶ್ರೀರಂಗಪಟ್ಟಣ	248.50	3	
		ಒಟ್ಟು	1328.50	12	
		ನಬಾರ್ಡ್-23 ಮಾಲಿಕೆಯಡಿ ಪಿ.ಯು.ಕಾಲೇಜು			
1	2018-19	ಕೆ.ಆರ್.ಪೇಟೆ	92.00	1	
2	2018-19	ಮಂಡ್ಯ	92.00	1	
		ಒಟ್ಟು	184.00	2	
		ನಬಾರ್ಡ್ ಮಾಲಿಕೆ-22ರ ಅಂಗನವಾಡಿ ಕಟ್ಟಡಗಳು			
1	2018-19	ಮದ್ದೂರು	91.70	10	
		ಒಟ್ಟು	91.70	10	

2019-20ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿ ಯಾವುದೇ ಕಾಮಗಾರಿಗಳು ಮಂಜೂರಾತಿಯಾಗಿರುವುದಿಲ್ಲ.
2018-19ನೇ ಸಾಲಿನಲ್ಲಿ ಮಂಜೂರಾಗಿರುವ ಕಾಮಗಾರಿಗಳನ್ನು ಮುಂದುವರೆಸಲಾಗಿರುತ್ತದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್ ಮಂಡ್ಯ

ಅನುಬಂಧ-2

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.

ಶ್ರೀ.ಶ್ರೀನಿವಾಸ್.ಎಂ.(ಮಂಡ್ಯ) ವಿಧಾನಸಭಾ ಸದಸ್ಯರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2946ಕ್ಕೆ ಉತ್ತರ.

ಅನುಬಂಧ- 1

ಕಳೆದ ಮೂರು ವರ್ಷಗಳಲ್ಲಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ವ್ಯಾಪ್ತಿಗೆ ನಬಾರ್ಡ್ ವತಿಯಿಂದ ವಿವಿಧ ಕಾಮಗಾರಿಗಳಿಗೆ ಮಂಜೂರಾಗಿರುವ ಅನುದಾನ ಹಾಗೂ ಕಾಮಗಾರಿಗಳ ವಿವರ.

ಕ್ರ.ಸಂ	ಸಾಲು	ವಿಧಾನಸಭಾ ಕ್ಷೇತ್ರ	ಕಾಮಗಾರಿಯ ವಿವರ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)	ಷರಾ
			ನಬಾರ್ಡ್ ಮಾಲಿಕೆ-23 ರಸ್ತೆಗಳು		
1	2017-18	ಮದ್ದೂರು	ಸೋಂಪುರ ರಸ್ತೆಯಿಂದ ಉಪ್ಪಾರದೊಡ್ಡಿ ಮಾರ್ಗವಾಗಿ ಗುರುದೇವರಹಳ್ಳಿ ರಸ್ತೆ ಅಭಿವೃದ್ಧಿ	100.00	
2	2017-18	ಮಳವಳ್ಳಿ	ಚಿಕ್ಕಮಾಳಿಗೆಕೊಪ್ಪಲು ರಸ್ತೆಯಿಂದ ಹೊನಗಾನಹಳ್ಳಿ ರಸ್ತೆ ಅಭಿವೃದ್ಧಿ	80.00	
3	2017-18	ಮೇಲುಕೋಟೆ	ಎಸ್.ಸಿ.ರಸ್ತೆಯಿಂದ (ಎಸ್.ಹೆಚ್.7) ಹಸನ್ ಪುರ ರಸ್ತೆ ಅಭಿವೃದ್ಧಿ	80.00	
			ಒಟ್ಟು	260.00	
			ನಬಾರ್ಡ್ ಮಾಲಿಕೆ-22 ಕೆರೆಗಳು		
1	2017-18	ಮಳವಳ್ಳಿ	ಸರಗೂರು ಕೆರೆ ಅಭಿವೃದ್ಧಿ ಕಾಮಗಾರಿ	50.00	
2	2017-18	ಕೆ.ಆರ್.ಪೇಟೆ	ಬನ್ನೇನಹಳ್ಳಿ ಮಂಚಿನಕಟ್ಟೆ ಅಭಿವೃದ್ಧಿ ಕಾಮಗಾರಿ	50.00	
3	2017-18	ಶ್ರೀರಂಗಪಟ್ಟಣ	ನೇರಳೇಕೆರೆ-ಮರಿಯಯ್ಯನಕೆರೆ ಅಭಿವೃದ್ಧಿ ಕಾಮಗಾರಿ	30.00	
			ಒಟ್ಟು	130.00	
			ನಬಾರ್ಡ್ ಮಾಲಿಕೆ-22 ಪಿ.ಯು.ಕಾಲೇಜು		
1	2017-18	ಮಂಡ್ಯ	ಬಸರಾಳು ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	49.95	
2	2017-18	ಮಂಡ್ಯ	ಪೊಲೀಸ್ ಕಾಲೋನಿ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	49.95	
3	2017-18	ಮದ್ದೂರು	ಮಲ್ಲನಕುಪ್ಪೆ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	49.95	

ಕ್ರ.ಸಂ	ಸಾಲು	ವಿಧಾನಸಭಾ ಕ್ಷೇತ್ರ	ಕಾಮಗಾರಿಯ ವಿವರ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)	ಷರಾ
4	2017–18	ಮಳವಳ್ಳಿ	ಹಲಗೂರು ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	49.95	
5	2017–18	ನಾಗಮಂಗಲ	ನಾಗಮಂಗಲ ಟೌನ್ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	49.95	
6	2017–18	ಶ್ರೀರಂಗಪಟ್ಟಣ	ತಗ್ಗಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	49.95	
			ಒಟ್ಟು	299.70	
			ನಬಾರ್ಡ್ ಮಾಲಿಕೆ–24ರಡಿ ರಸ್ತೆಗಳು		
1	2018–19	ಮದ್ದೂರು	ಕೆ.ಬೆಳ್ಳೂರು ಎಸ್.ಸಿ.ಕಾಲೋನಿಯಿಂದ ಆರ್ ಹೆಚ್ ರಸ್ತೆ ಯಿಂದ ಬನ್ನಹಳ್ಳಿ ಅರೆಕಲ್ ದೊಡ್ಡಿ ರಸ್ತೆ ಅಭಿವೃದ್ಧಿ.	100.00	
2	2018–19	ಮದ್ದೂರು	ಕೆ.ಕೆ. ರಸ್ತೆಯಿಂದ ಚಾಮಲಾಪುರ ದೊಡ್ಡಿ ಬೆಟ್ಟದಾಸನದೊಡ್ಡಿ ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ	200.00	
3	2018–19	ಮಳವಳ್ಳಿ	ಹುಸ್ಕೂರು ನಿಂದ ಬಾಣಗಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ.	100.00	
4	2018–19	ನಾಗಮಂಗಲ	ತಟ್ಟಹಳ್ಳಿ ಹುಳ್ಳೇನಿಯಿಂದ ದಮ್‌ಜಕ್ಕನಹಳ್ಳಿ ಮಾರ್ಗದಿಂದ ದಂಡಿಗನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ.	100.00	
5	2018–19	ನಾಗಮಂಗಲ	ಲಕ್ಕೇಗೌಡನಕೊಪ್ಪಲು ನಿಂದ ದೊಂದೇಮಾದಹಳ್ಳಿ, ಕೊಂಬಿನಕೊಪ್ಪಲು ರಸ್ತೆ ಅಭಿವೃದ್ಧಿ ಕಾಮಗಾರಿ.	200.00	
6	2018–19	ಮೇಲುಕೋಟೆ	ಎಲೆಕೆರೆ ಶಂಭೂನಹಳ್ಳಿ ಮಾರ್ಗ ಡಾಮಡಹಳ್ಳಿ ರಸ್ತೆ ಅಭಿವೃದ್ಧಿ	100.00	
7	2018–19	ಮೇಲುಕೋಟೆ	ಹೊಸಸಾಯಪ್ಪನಹಳ್ಳಿ ಯಿಂದ ಹಳೇ ಸಾಯಪ್ಪನಹಳ್ಳಿ, ಸುಂಡಹಳ್ಳಿ ಮಾರ್ಗವಾಗಿ ರಸ್ತೆ ಅಭಿವೃದ್ಧಿ	100.00	
8	2018–19	ಮೇಲುಕೋಟೆ	ಎಸ್.ಹೆಚ್.–07 ರಸ್ತೆಯಿಂದ ಹುಲ್ಕೆರೆ ಕೊಪ್ಪಲು ರಸ್ತೆ ಅಭಿವೃದ್ಧಿ ಕಾಮಗಾರಿ.	100.00	
9	2018–19	ಮಂಡ್ಯ	ನಂದಹಳ್ಳಿ ಯಿಂದ ಹರಕದಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ.	80.00	
10	2018–19	ಶ್ರೀರಂಗಪಟ್ಟಣ	ಗೌಡಹಳ್ಳಿ ಯಿಂದ ಟಿ.ಎಂ.ಹೊಸೂರು ರಸ್ತೆ ಅಭಿವೃದ್ಧಿ	48.50	

ಕ್ರ.ಸಂ	ಸಾಲು	ವಿಧಾನಸಭಾ ಕ್ಷೇತ್ರ	ಕಾಮಗಾರಿಯ ವಿವರ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)	ಷರಾ
11	2018-19	ಶ್ರೀರಂಗಪಟ್ಟಣ	ಅರಕೆರೆ ಯಿಂದ ವಡೆಯಾಂಡಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ.	100.00	
12	2018-19	ಶ್ರೀರಂಗಪಟ್ಟಣ	ಚನ್ನಹಳ್ಳಿ ಫೀಲ್ಡ್ ರಸ್ತೆ ಅಭಿವೃದ್ಧಿ ಕಾಮಗಾರಿ	100.00	
			ಒಟ್ಟು	1328.50	
			ನಬಾರ್ಡ್ ಮಾಲಿಕೆ-23ರ ಪದವಿಪೂರ್ವ ಕಾಲೇಜು ಕಟ್ಟಡ		
1	2018-19	ಕೆ.ಆರ್.ಪೇಟೆ	ಕೆ.ಆರ್.ಪೇಟೆ ಟೌನ್ ನ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	92.00	
2	2018-19	ಮಂಡ್ಯ	ಅರಕೇಶ್ವರ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ	92.00	
			ಒಟ್ಟು	184.00	
			ನಬಾರ್ಡ್ ಮಾಲಿಕೆ-22 ಅಂಗನವಾಡಿ ಕಟ್ಟಡಗಳು		
1	2018-19	ಮದ್ದೂರು	ಬೋರಾಪುರ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
2	2018-19	ಮದ್ದೂರು	ಹಳ್ಳೀಕೆರೆ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
3	2018-19	ಮದ್ದೂರು	ಹೆಚ್.ಹೊಸಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
4	2018-19	ಮದ್ದೂರು	ಕುದರಗುಂಡಿ-2 ಗ್ರಾಮ ದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
5	2018-19	ಮದ್ದೂರು	ನಗರಕೆರೆ-2 ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
6	2018-19	ಮದ್ದೂರು	ಕೆ.ಕೋಡಿಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
7	2018-19	ಮದ್ದೂರು	ಚಾಪುರದೊಡ್ಡಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
8	2018-19	ಮದ್ದೂರು	ಮದ್ದೂರು ತಾ: ಚುಂಚಗಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
9	2018-19	ಮದ್ದೂರು	ಮದ್ದೂರು ತಾ: ಬೆಸಗರಹಳ್ಳಿ-6 ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
10	2018-19	ಮದ್ದೂರು	ಮದ್ದೂರು ತಾ: ಹರಳಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ	9.17	
			ಒಟ್ಟು	91.70	

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್ ಮಂಡ್ಯ

02

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2926
ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)
ಉತ್ತರಿಸಬೇಕಾದ ದಿನಾಂಕ : 24-03-2021.
ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಎಂ.ಎಸ್.ಡಿ.ಪಿ ಯೋಜನೆಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗಿರುವ 25 ವಸತಿ ನಿಲಯಗಳನ್ನು ಪ್ರಾರಂಭಿಸಲು ಸಲ್ಲಿಸಲಾದ ಪ್ರಸ್ತಾವನೆ ಮಂಜೂರಾಗದೇ ವಿಳಂಬವಾಗಲು ಕಾರಣವೇನು;	2018-19ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-217 ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದಂತೆ M.S.D.P. ಯೋಜನೆ ಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗುವ 25 ಸ್ಥಳಗಳಲ್ಲಿ ವಿದ್ಯಾರ್ಥಿನಿಲಯ/ ಮಾದರಿ/ ಆದರ್ಶ ಶಾಲೆ/ವಸತಿ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿರುತ್ತದೆ. 2018-19ನೇ ಸಾಲಿನಲ್ಲಿ ಆರ್ಥಿಕ ನಿರ್ಭಂದದ (Financial Restrictions) ಹಿನ್ನೆಲೆಯಲ್ಲಿ ವಸತಿ ಶಾಲೆಗಳ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯನ್ನು ಮುಂದಿನ 2 ವರ್ಷಗಳಿಗೆ ಆರ್ಥಿಕ ಇಲಾಖೆಯಿಂದ ಮುಂದೂಡಲಾಗಿರುತ್ತದೆ ಎಂದು ತಿಳಿಸಿರುವುದರಿಂದ ಎರಡು ವರ್ಷಗಳ ನಂತರ ಸದರಿ ಪ್ರಸ್ತವನೆಯನ್ನು ಆರ್ಥಿಕ ಇಲಾಖೆಗೆ ಮರು ಸಲ್ಲಿಸಿ ಮಂಜೂರಾತಿಗಾಗಿ ಕೋರಲಾಗುವುದು.
ಆ.	ಸದರಿ ವಸತಿ ನಿಲಯಗಳನ್ನು ಪ್ರಸ್ತುತ ವರ್ಷದಲ್ಲಿಯೇ ಪ್ರಾರಂಭಿಸಲಾಗುತ್ತದೆಯೇ:	-ಇಲ್ಲ-
ಇ	ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು?	ಆರ್ಥಿಕ ಇಲಾಖೆರವರು ಮಂಜೂರಾತಿ ನೀಡಿದ ನಂತರ ವಿದ್ಯಾರ್ಥಿನಿಲಯ/ ಮಾದರಿ/ ಆದರ್ಶ ಶಾಲೆ/ವಸತಿ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: MWD 135 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

03

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2936
ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)
ಉತ್ತರಿಸಬೇಕಾದ ದಿನಾಂಕ	:	24-03-2021.
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	2019-20 ಹಾಗೂ 2020-21 ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಬರುವ ಅಲ್ಪಸಂಖ್ಯಾತ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಮಂಜೂರಾದ ಅನುದಾನವೆಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿನ ಅಲ್ಪಸಂಖ್ಯಾತರ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ರೂ.200.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ಮೊದಲನೇ ಕಂತಿನಲ್ಲಿ ಶೇ.25% ರಷ್ಟು ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2018-19 ಹಾಗೂ 2019-20 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರ ಕಾಲೋನಿಗಳ ಮೂಲಭೂತ ಸೌಕರ್ಯದ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು 2020-21 ನೇ ಸಾಲಿನ ಆಯವ್ಯಯದಲ್ಲಿ One time settlement ರನ್ವಯ ಬಿಡುಗಡೆ ಮಾಡಲಾದ ರೂ.102.00 ಕೋಟಿ ಅನುದಾನದಲ್ಲಿ ಪ್ರಗತಿಯನ್ನಾಧರಿಸಿ ಉಳಿದ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. ವಿಧಾನಸಭಾ ಕ್ಷೇತ್ರವಾರು ಮಾಹಿತಿಯನ್ನು **"ಅನುಬಂಧ-1"** ರಲ್ಲಿ ನೀಡಲಾಗಿದೆ. 2020-21ನೇ ಸಾಲಿನಲ್ಲಿ ಈ ಯೋಜನೆಯಡಿ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.
ಆ.	ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ವಾಸಿಸುತ್ತಿದ್ದು, ಸದರಿ ಕಾಲೋನಿಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಗಮನಹರಿಸುವುದೇ;	ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯ ಆಧಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಇ	ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಅನುದಾನ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?	ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಿರುವುದಿಲ್ಲ.

ಸಂಖ್ಯೆ: **MWD 134 LMQ 2021**

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

15

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	3637
ಸದಸ್ಯರ ಹೆಸರು	:	ಶ್ರೀ ಪ್ರಿಯಾಂಕ್ ಎಂ.ಖರ್ಗೆ(ಚಿತ್ತಾಪುರ)
ಉತ್ತರಿಸಬೇಕಾದ ದಿನಾಂಕ	:	24-03-2021.
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸಾತನೂರು ಗ್ರಾಮದ ಸರ್ಕಾರಿ ಜಮೀನಿನಲ್ಲಿ ಅಲ್ಪಸಂಖ್ಯಾತರ ನವೋದಯ ಮಾದರಿ ವಸತಿ ಶಾಲೆಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದರೂ ಕಾಮಗಾರಿಯು ಪ್ರಾರಂಭವಾಗಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	• ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ನವೋದಯ ಮಾದರಿ ವಸತಿ ಶಾಲೆಯನ್ನು ಪ್ರಾರಂಭಿಸಲು 2017-18 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ. • ದಿನಾಂಕ:15-07-2017 ರಂದು ಸದರಿ ಮಾದರಿ ವಸತಿ ಶಾಲೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿರುತ್ತದೆ. • ಸದರಿ ಮಾದರಿ ವಸತಿ ಶಾಲೆ ಕಟ್ಟಡ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದಿಂದ ಪಿ.ಎಂ.ಜೆ.ವಿ.ಕೆ.ರಡಿ ರೂ.18.00ಕೋಟಿಗಳಿಗೆ ದಿನಾಂಕ:23-09-2017 ರಂದು ಮಂಜೂರಾತಿ ನೀಡಲಾಗಿರುತ್ತದೆ. • ದಿನಾಂಕ:02-03-2020 ರಲ್ಲಿ ಸದರಿ ಕಟ್ಟಡ ನಿರ್ಮಾಣಕ್ಕಾಗಿ ಕಲಬುರಗಿ ಜಿಲ್ಲಾಧಿಕಾರಿಗಳು 8 ಎಕರೆ ಜಮೀನನ್ನು ಮಂಜೂರು ಮಾಡಿರುತ್ತಾರೆ. • ದಿನಾಂಕ:09-07-2020 ರ ಪತ್ರದ ಮುಖಾಂತರ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಲಬುರಗಿ ರವರು ನಿವೇಶನ ಪಡೆದು ಕಟ್ಟಡ ನಿರ್ಮಾಣಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ ಕಟ್ಟಡ ಕಾಮಗಾರಿ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ಮಂಡಳಿರವರಿಗೆ ದಿನಾಂಕ:25-08-2020 ರಂದು ಕಾಮಗಾರಿಯನ್ನು ಕೈಗೊಳ್ಳಲು ಕೋರಲಾಗಿರುತ್ತದೆ.

•		• ಕರ್ನಾಟಕ ಗೃಹ ಮಂಡಳಿ ರವರು ರೂ.18.00 ಕೋಟಿಗಳಿಗೆ ಅಂದಾಜು ಪಟ್ಟಿ ಮತ್ತು ನಕಾಶೆಯನ್ನು ದಿನಾಂಕ:23-11-2020 ರಂದು ನೀಡಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಚಿವ ಸಂಪುಟದ ಒಪ್ಪಿಗೆ ಪಡೆದು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.
ಆ.	ಬಂದಿದ್ದಲ್ಲಿ, ವಿಳಂಬವಾಗಲು ಕಾರಣಗಳೇನು? (ಮಾಹಿತಿ ನೀಡುವುದು)	ಜಿಲ್ಲಾಡಳಿತ ಕಲಬುರಗಿ ರವರಿಂದ ನಿವೇಶನ ಪಡೆಯುವಲ್ಲಿ ವಿಳಂಬವಾಗಿರುತ್ತದೆ.

ಸಂಖ್ಯೆ: **MWD 133 LMQ 2021**

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	3552
ಸದಸ್ಯರ ಹೆಸರು	ಶ್ರೀ ಎಸ್ ಎನ್ ನಾರಾಯಣಸ್ವಾಮಿ ಕೆ. ಎಮ್ (ಬಂಗಾರಪೇಟೆ)
ಉತ್ತರಿಸಬೇಕಾದ ದಿನಾಂಕ	24.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಸುವರ್ಣ ಗ್ರಾಮ ಯೋಜನೆಯನ್ನು ಪುನಃ ಅನುಷ್ಠಾನಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?	ಇಲ್ಲ
ಆ.	ಗ್ರಾಮೀಣ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರ ಸಿದ್ದವಿದೆಯೇ;	2006-07ನೇ ಸಾಲಿನಲ್ಲಿ ಆರಂಭಗೊಂಡು 5 ಹಂತಗಳಲ್ಲಿ 5613 ಗ್ರಾಮಗಳಲ್ಲಿ ಅನುಷ್ಠಾನಕ್ಕೆ ತಂದ ಸುವರ್ಣ ಗ್ರಾಮೋದಯ ಯೋಜನೆಯ ಪರ್ಯಾಯವಾಗಿ: • 2014-15ನೇ ಸಾಲಿನಲ್ಲಿ ಪ್ರಾರಂಭಿಸಲಾದ ಗ್ರಾಮ ವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ಕನಿಷ್ಟ ರೂ.75.00 ಲಕ್ಷಗಳಂತೆ ಹಂಚಿಕೆ ಮಾಡಿ 939 ಗ್ರಾಮಗಳನ್ನು ರೂ.755.02 ಕೋಟಿಗಳ ಅನುದಾನದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ 2017-18ನೇ ಸಾಲಿನಲ್ಲಿ ಯೋಜನೆಯನ್ನು ಮುಕ್ತಾಯಗೊಳಿಸಲಾಗಿದೆ. ಮುಂದುವರೆದು, • 2017-18ನೇ ಸಾಲಿನಿಂದ ಜಾರಿಗೆ ತರಲಾದ **ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ** ಪ್ರತಿ ಗ್ರಾಮಕ್ಕೆ ರೂ. 1.00 ಕೋಟಿಯಂತೆ ಒಟ್ಟು ರೂ.1000.00 ಕೋಟಿಗಳ ಅನುದಾನದಲ್ಲಿ 1000 ಗ್ರಾಮಗಳನ್ನು 2 ವರ್ಷಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ರಾಜ್ಯಾದ್ಯಂತ 991 ಗ್ರಾಮಗಳಲ್ಲಿ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಈ ಸಾಲಿಗೆ ಪೂರ್ಣಗೊಳಿಸಲಾಗುವುದು.
ಇ.	ಇಲ್ಲದಿದ್ದಲ್ಲಿ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಪರ್ಯಾಯವಾಗಿ ಯೋಜನೆಯನ್ನು ಸರ್ಕಾರ ಸಿದ್ದಪಡಿಸಿದೆಯೇ; (ವಿವರಗಳನ್ನು ನೀಡುವುದು)	ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

		1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2. ಸ್ವಚ್ಛ ಭಾರತ ಅಭಿಯಾನ 3. ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಪಿ.ಡಬ್ಲ್ಯೂಪಿ & ಜೆ.ಜೆ.ಎಂ) 4. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ 5. ಕೆರೆಗಳ ಪುನರ್ಜೀವನ ಹಾಗೂ ಕೆರೆಗಳ ಪುನಶ್ಚೇತನ ಕಾರ್ಯಕ್ರಮ 6. 14 ಮತ್ತು 15ನೇ ಹಣಕಾಸು ಆಯೋಗದ ಅನುದಾನ 7. ಗ್ರಾಮ ಪಂಚಾಯಿತಿ ಶಾಸನಬದ್ಧ ಅನುದಾನ

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/35:ಆರ್‌ಆರ್‌ಸಿ:2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

5

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3549

ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ(ಜಮಖಂಡಿ)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 24/03/2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಜಮಖಂಡಿ ಮತಕ್ಷೇತ್ರದ ಕವಟಗಿ ಗ್ರಾಮದಲ್ಲಿ 2 ಅಂಗನವಾಡಿ ಕೇಂದ್ರಗಳು ಕಟ್ಟಡವಿಲ್ಲದೆ ಸರ್ಕಾರಿ ಶಾಲೆ'ಯಲ್ಲಿ ಮತ್ತು ಊರಿನ ಚಾವಡಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಕವಟಗಿ ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳು ಗ್ರಾಮದ ಚಾವಡಿ(ಪಂಚಾಯತ ಕಟ್ಟಡ) ದಲ್ಲಿ ನಡೆಯುತ್ತಿವೆ. ಸದರಿ ಅಂಗನವಾಡಿ ಕೇಂದ್ರಗಳ ಆಹಾರ ದಾಸ್ತಾನನ್ನು ಪ್ರಾಥಮಿಕ ಶಾಲೆಯ ಒಂದು ಕೊಠಡಿಯಲ್ಲಿ ಶೇಖರಿಸಿ ಇಡಲಾಗುತ್ತಿದೆ.
ಆ.	ಹಾಗಿದ್ದಲ್ಲಿ, ಕವಟಗಿ ಗ್ರಾಮದಲ್ಲಿ ಎರಡು ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?	ಕವಟಗಿ ಗ್ರಾಮ ಕೃಷ್ಣಾ ಮೇಲ್ದಂಡೆ (ಯು.ಕೆ.ಪಿ) ಯೋಜನೆಯ ಮುಳುಗಡೆ ಪ್ರದೇಶ ವ್ಯಾಪ್ತಿಯಲ್ಲಿರುವುದು. ಯು.ಕೆ.ಪಿ ಯೋಜನೆಯಲ್ಲಿ 2 ನೇ ಹಂತದ ಪುನರ್ ವಸತಿ ಕಲ್ಪಿಸಿದ ನಂತರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನ ಮತ್ತು ಅನುದಾನ ಲಭ್ಯತೆ ಆಧಾರದ ಮೇಲೆ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಸಂಖ್ಯೆ: ಮಮಇ 142 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ
ಸಚಿವರು.

ಕರ್ನಾಟಕ ವಿಧಾನಸಭೆ

6

ಸದಸ್ಯರ ಹೆಸರು : ಶ್ರೀ. ನರೇಂದ್ರ . ಆರ್ (ಹನೂರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3557
ಉತ್ತರ ದಿನಾಂಕ : 24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈಗಾಗಲೇ ಕುಡಿಯುವ ನೀರಿಗೆ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಿಲ್ಲಾಡಳಿತದಿಂದ ಕುಡಿಯುವ ನೀರು ಪೂರೈಸಲು ಅಗತ್ಯಕ್ರಮ ಜರುಗಿಸಲಾಗುತ್ತಿದೆ. ಹನೂರು ವಿಧಾನಸಭಾ ಕ್ಷೇತ್ರವಿರುವ ಕೊಳ್ಳೇಗಾಲ ತಾಲ್ಲೂಕಿಗೆ ಕುಡಿಯುವ ನೀರು ಸರಬರಾಜು ಕಾಮಗಾರಿಗಳಿಗೆ 2018-19ನೇ ಸಾಲಿನಲ್ಲಿ SDP ಅಡಿಯಲ್ಲಿ ರೂ.200.75ಲಕ್ಷಗಳು ಮತ್ತು NRDWP ಅಡಿಯಲ್ಲಿ ರೂ.262.83ಲಕ್ಷಗಳು ಹಾಗೂ 2019-20ನೇ ಸಾಲಿನಲ್ಲಿ SDP ಅಡಿಯಲ್ಲಿ ರೂ.198.21ಲಕ್ಷಗಳು ಮತ್ತು NRDWP ಅಡಿಯಲ್ಲಿ ರೂ.291.76ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2020-21ನೇ ಸಾಲಿನಲ್ಲಿ ಹನೂರು ವಿಧಾನಸಭಾ ಕ್ಷೇತ್ರಕ್ಕೆ ಜಿಲ್ಲಾ ಪಂಚಾಯತ್ ಅಧ್ಯಕ್ಷರ ವಿವೇಚನಾ ಅನುದಾನದಡಿ ರೂ.33.40ಲಕ್ಷ, ಟಾಸ್ಕ್‌ಫೋರ್ಸ್ ಯೋಜನೆಯಡಿ ರೂ.50.00ಲಕ್ಷ ಹಾಗೂ Contingency Action Plan (CAP) ಯೋಜನೆಯಡಿ ರೂ.50.00ಲಕ್ಷ, ಒಟ್ಟು ರೂ.133.40ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ಬರಪೀಡಿತ / ಬರಪೀಡಿತವಲ್ಲದ ತಾಲ್ಲೂಕುಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಿಯಾ ಯೋಜನೆ ಸಿದ್ಧಪಡಿಸುವ ಹಂತದಲ್ಲಿದ್ದು, ಅಗತ್ಯತೆ ಮತ್ತು ಅನುದಾನದ ಲಭ್ಯತೆ ಅನುಸಾರ ಕ್ರಮ ಜರುಗಿಸಲಾಗುವುದು. ಶಾಶ್ವತ ಕುಡಿಯುವ ನೀರು ಸರಬರಾಜಿಗಾಗಿ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 291 ಜನವಸತಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಮೊದಲನೇ ಹಂತದಲ್ಲಿ ಟೆಂಡರ್ ಕರೆದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಮೊದಲನೇ ಹಂತದ ಕಾಮಗಾರಿಯನ್ನು ನವೆಂಬರ್ 2021ಕ್ಕೆ ಪೂರ್ಣಗೊಳಿಸಿ 98 ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಉದ್ದೇಶವಿದೆ. 2ನೇ ಹಂತದ ಕಾಮಗಾರಿಯಲ್ಲಿ ಒಟ್ಟು 193 ಜನವಸತಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಕಾಮಗಾರಿಯನ್ನು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.
ಆ.	ಬಂದಿದ್ದಲ್ಲಿ ಕುಡಿಯುವ ನೀರಿನ ಅಭಾವವನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	

ಸಂ:ಗ್ರಾಕುನೀ&ನೈಇ 113 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3556
ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೇರದಾಳ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ: : 24-3-2021

ಕ್ರ ಸಂ	ಪ್ರಶ್ನೆ	ಉತ್ತರ
ಅ.	ತೇರದಾಳ ಮತ ಕ್ಷೇತ್ರದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು; ಸ್ವಂತ ಕಟ್ಟಡ ಹೊಂದಿರುವ ಕೇಂದ್ರಗಳೆಷ್ಟು; ಉಳಿದ ಕೇಂದ್ರಗಳಿಗೆ ಯಾವಾಗ ಕಟ್ಟಡಗಳನ್ನು ಮಂಜೂರು ಮಾಡಲಾಗುವುದು.	ತೇರದಾಳ ಮತಕ್ಷೇತ್ರದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ: 302. ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ:167 ಇತರೆ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಕೆಳಕಂಡಂತಿವೆ. ಪಂಚಾಯತ್ ಕಟ್ಟಡ: 17 ಸಮುದಾಯ ಭವನ: 14 ಶಾಲಾ ಕಟ್ಟಡ: 19 ಬಾಡಿಗೆ ಕಟ್ಟಡ: 85 ನಾಲ್ಕು (4) ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಐದು (5) ಅಂಗನವಾಡಿ ಕಟ್ಟಡಗಳಿಗೆ ನಿವೇಶನ ಲಭ್ಯವಿರುತ್ತದೆ. ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನಿವೇಶನ ಮತ್ತು ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ನಿರ್ಮಿಸಲಾಗುವುದು.
ಆ.	ಸದರಿ ಕೇಂದ್ರಗಳಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ ಎಷ್ಟು; ದಾಖಲಾತಿ ಎಷ್ಟು ಮತ್ತು ಹಾಜರಾತಿ ಎಷ್ಟು;	ತೆರದಾಳ ಮತಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಹಾಗೂ ಹಾಜರಾಗಿರುವ ಮಕ್ಕಳ ವಿವರಗಳು ಈ ಕೆಳಕಂಡಂತಿವೆ. ಸದರಿ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆ: 25849 ಹಾಜರಾತಿ ಪ್ರಕಾರ ಮಕ್ಕಳ ಸಂಖ್ಯೆ: 25198

ಇ.	ಪೌಷ್ಠಿಕ ಆಹಾರವನ್ನು ವಾರವಿಡಿ ಯಾವ ರೀತಿ ಒದಗಿಸಲಾಗುವುದು (ಸಂಪೂರ್ಣ ಮಾಹಿತಿ ಒದಗಿಸುವುದು)	ಭಾರತ ಸರ್ಕಾರದ ಮಾರ್ಗಸೂಚಿಯಂತೆ, ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ನೋಂದಾಯಿತರಾದ 6 ತಿಂಗಳಿನಿಂದ 3 ವರ್ಷದ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ಫಲಾನುಭವಿಗಳಿಗೆ, ವಾರಕ್ಕೆ 6 ದಿನ ಮನೆ ಬಾಗಿಲಿಗೆ ಒದಗಿಸಲಾಗುತ್ತಿದೆ. 3 ವರ್ಷದಿಂದ 6 ವರ್ಷದ ಮಕ್ಕಳಿಗೆ ವಾರಕ್ಕೆ 6 ದಿನಗಳು ಬೆಳಗಿನ ಉಪಹಾರ ಮತ್ತು ಮಧ್ಯಾಹ್ನದ ಬಿಸಿಯೂಟ ರೂಪದಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ಅಂಗನವಾಡಿ ಕೇಂದ್ರಗಳಲ್ಲಿಯೇ ಒದಗಿಸಲಾಗುತ್ತಿದೆ. ಇದಲ್ಲದೇ ಗರ್ಭಿಣಿ ಹಾಗೂ ಬಾಣಂತಿಯರಿಗೆ ವಾರಕ್ಕೆ 6 ದಿನಗಳು ಅಂಗನವಾಡಿ ಕೇಂದ್ರಗಳಲ್ಲಿ ಬಿಸಿಯೂಟ ರೂಪದಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸಲಾಗುತ್ತಿದೆ. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಅಂಗನವಾಡಿ ಕೇಂದ್ರದ ಫಲಾನುಭವಿ ಗಳಿಗೆ ನೀಡಲಾಗುತ್ತಿದ್ದ ಬಿಸಿಯೂಟದ ಬದಲಾಗಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಯು ನಿಗದಿಪಡಿಸಿದ ಆಹಾರ ಸಾಮಗ್ರಿಗಳನ್ನು ತಿಂಗಳಿಗೆ ಒಂದು ಬಾರಿ ಫಲಾನುಭವಿಗಳ ಮನೆಬಾಗಿಲಿಗೆ (THR) ಆಹಾರ ಸಾಮಗ್ರಿಗಳನ್ನು ತಲುಪಿಸಲಾಗುತ್ತಿದೆ. ಸಂಪೂರ್ಣ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಈ	ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ಪ್ರಾರಂಭಿಸಲು ಇರುವ ನಿಯಮಗಳೇನು;	ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹೊಸದಾಗಿ ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. • ನಗರ / ಗ್ರಾಮೀಣ ಪ್ರದೇಶದಲ್ಲಿ 1000 ಜನ ಸಂಖ್ಯೆಗೆ ಒಂದು ಹೊಸ ಅಂಗನವಾಡಿ ಕೇಂದ್ರವನ್ನು ತೆರೆಯಬಹುದಾಗಿದೆ. • ಬುಡಕಟ್ಟು ಜನಾಂಗ ಇರುವ ಪ್ರದೇಶದಲ್ಲಿ 700 ಜನಸಂಖ್ಯೆಗೆ ಒಂದು ಹೊಸ ಅಂಗನವಾಡಿ ಕೇಂದ್ರವನ್ನು ತೆರೆಯ ಬಹುದಾಗಿದೆ. • 150 ರಿಂದ 400 ಜನಸಂಖ್ಯೆಗೆ ಹೊಂದಿರುವ

		ನಗರ / ಗ್ರಾಮೀಣ ಪ್ರದೇಶದಲ್ಲಿ 1 ಮಿನಿ ಅಂಗನವಾಡಿ ಕೇಂದ್ರ ವನ್ನು ತೆರೆಯಬಹುದಾಗಿದೆ. • ಗುಡ್ಡಗಾಡು ಹಾಗೂ ಬುಡಕಟ್ಟು ಜನಾಂಗ ಇರುವ ಪ್ರದೇಶದಲ್ಲಿ 150 ರಿಂದ 300 ಜನಸಂಖ್ಯೆಗೆ 1 ಹೊಸ ಮಿನಿ ಅಂಗನವಾಡಿ ಕೇಂದ್ರವನ್ನು ತೆರೆಯಬಹುದಾಗಿದೆ. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಾದ 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಮತ್ತು ಶಾಲೆಬಿಟ್ಟ ಪ್ರಾಯಪೂರ್ವ ಬಾಲಕಿಯರಿಗೆ ಮನೆಗೆ (THR) ಪೂರಕ ಪೌಷ್ಟಿಕ ಅಹಾರವನ್ನು ಒದಗಿಸಲಾಗುತ್ತದೆ.
ಉ	ಈ ಕ್ಷೇತ್ರದ ಎಷ್ಟು ಕಡೆ ಹೊಸ ಕೇಂದ್ರಗಳಿಗೆ ಬೇಡಿಕೆ ಬಂದಿವೆ; ಇವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?	ತೇರದಾಳ ಮತಕೇತ್ರದಲ್ಲಿ ಒಟ್ಟು 19 ಹೊಸ ಅಂಗನವಾಡಿ ಕೇಂದ್ರಗಳಿಗೆ ಬೇಡಿಕೆ ಬಂದಿರುತ್ತವೆ. ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಮಂಜೂರಾತಿ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಮಮಇ 140 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಸಿದ್ದುಸವದಿ (ತೇರದಾಳ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3556 ಕ್ಕೆ ಅನುಬಂಧ

ಅಂಗನವಾಡಿ ಕೇಂದ್ರಗಳಲ್ಲಿ ಕೋವಿಡ್ ಪೂರ್ವದಲ್ಲಿ ವಾರದಲ್ಲಿ ನೀಡುತ್ತಿದ್ದ ಪೂರಕ ಪೌಷ್ಟಿಕ ಆಹಾರದ ವಿವರ

6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಮನೆಗೆ ವಿತರಿಸುವ ಪೂರಕ ಪೌಷ್ಟಿಕ ಆಹಾರದ ವಿವರ

ಕ್ರಮ ಸಂ.	ವಾರಗಳು	ಫಲಾನುಭವಿಗಳ ವಿವರ	ಮನೆಗೆ ನೀಡುವ ಪೂರಕ ಪೌಷ್ಟಿಕ ಆಹಾರ
1	ಸೋಮವಾರ ದಿಂದ ಶನಿವಾರದವರೆಗೆ	6 ತಿಂಗಳಿಂದ 3 ವರ್ಷದ ಮಕ್ಕಳಿಗೆ	ಪೌಷ್ಟಿಕ ಪುಷ್ಟಿ ಮಿಶ್ರಣ
2.	ಮಂಗಳವಾರ, ಗುರುವಾರ, ಶನಿವಾರ		ಹಾಲಿನ ಪುಡಿ
3.	ಮಂಗಳವಾರ ಮತ್ತು ಗುರುವಾರ		ಸಕ್ಕರೆ

3 ರಿಂದ 6 ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ವಿತರಿಸುವ ಪೂರಕ ಪೌಷ್ಟಿಕ ಆಹಾರದ ವಿವರ

ಕ್ರಮ ಸಂ.	ವಾರಗಳು	ಫಲಾನುಭವಿಗಳ ವಿವರ	ಬೆಳಗಿನ ಉಪಾಹಾರ	ಮಧ್ಯಾಹ್ನದ ಊಟ
1	ಸೋಮವಾರ,ಬುಧವಾರ ಶುಕ್ರವಾರ	3 ರಿಂದ 6 ವರ್ಷದ ಮಕ್ಕಳಿಗೆ	ಮೊಳಕೆ ಭರಿಸಿದ ಕಾಳು ಮತ್ತು ಹಾಲು	ಗೋಧಿ ರವೆ ಮತ್ತು ಬೆಲ್ಲದಿಂದ ತಯಾರಿಸಿದ ಸಜ್ಜಕ
2.	ಮಂಗಳವಾರ, ಗುರುವಾರ, ಶನಿವಾರ		ಶೇಂಗಾ ಉಂಡೆ	ಅನ್ನ, ಸಾಂಬಾರು
3.	ಮಂಗಳವಾರ ಮತ್ತು ಗುರುವಾರ		–	ಬೇಯಿಸಿದ ಕೋಳಿಮೊಟ್ಟೆ

ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಬಾಣಂತಿಯರಿಗೆ ವಿತರಿಸುವ ಆಹಾರದ ವಿವರ

ಕ್ರಮ ಸಂ.	ವಾರಗಳು	ಫಲಾನುಭವಿಗಳ ವಿವರ	ಮಧ್ಯಾಹ್ನದ ಊಟ
1	ಸೋಮವಾರ,ಬುಧವಾರ ಶುಕ್ರವಾರ	ಗರ್ಭಿಣಿ ಮತ್ತು ಬಾಣಂತಿಯರು	ಚಿತ್ರಾನ್ನ, ಶೇಂಗಾ ಚಿಕ್ಕಿ, ಹಾಲು, ಬೇಯಿಸಿದ ಕೋಳಿ ಮೊಟ್ಟೆ ಮತ್ತು ಮೊಟ್ಟೆ ಸೇವಿಸದ ಫಲಾನುಭವಿಗಳಿಗೆ ಮೊಳಕೆ ಭರಿಸಿದ ಹೆಸರುಕಾಳು
2.	ಮಂಗಳವಾರ, ಗುರುವಾರ, ಶನಿವಾರ		ಅನ್ನ, ಸಾಂಬಾರು ಶೇಂಗಾ ಚಿಕ್ಕಿ, ಹಾಲು, ಬೇಯಿಸಿದ ಕೋಳಿಮೊಟ್ಟೆ ಮತ್ತು ಮೊಟ್ಟೆ ಸೇವಿಸದ ಫಲಾನುಭವಿಗಳಿಗೆ ಮೊಳಕೆ ಭರಿಸಿದ ಹೆಸರುಕಾಳು

ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರದ ಫಲಾನುಭವಿ ಗಳಿಗೆ ನೀಡಲಾಗುತ್ತಿರುವ ಆಹಾರ ಪದಾರ್ಥಗಳ ವಿವರ

6 ತಿಂಗಳಿಂದ-3 ವರ್ಷದ ಮಕ್ಕಳಿಗೆ: ಅಕ್ಕಿ, ಹೆಸರುಬೇಳೆ, ಗೋಧಿ, ಕಡಲೆಬೇಳೆ, ಬೆಲ್ಲ ಸಾಮಗ್ರಿಗಳ ಪೌಷ್ಟಿಕ ಪುಷ್ಟಿ ಮಿಶ್ರಣ, ಸಕ್ಕರೆ, ಹಾಲಿನಪುಡಿ.

3ವರ್ಷದಿಂದ-6 ವರ್ಷದ ಮಕ್ಕಳಿಗೆ: ಸಕ್ಕರೆ, ಹಾಲಿನಪುಡಿ ಹೆಸರುಕಾಳು, ಶೇಂಗಾಬೀಜ, ಬೆಲ್ಲ, ಗೋಧಿರವೆ, ಅಕ್ಕಿ ತೊಗರಿಬೇಳೆ, ಒಣಮೆಣಸಿನಕಾಯಿ, ಉಪ್ಪು, ಮಸಾಲೆಪುಡಿ, ಎಣ್ಣೆ, ಅರಿಶಿನಪುಡಿ ಮತ್ತು ಮೊಟ್ಟೆ.

****

8

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3523

ಸದಸ್ಯರ ಹೆಸರು : ಶ್ರೀ ಮಹೇಶ್ ಎನ್.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಸಂತೆಮರಹಳ್ಳಿ ಮತ್ತು ಬಿಳಿಗಿರಿರಂಗನ ಬೆಟ್ಟದ ಬಸ್ ನಿಲ್ದಾಣಗಳ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;	ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಸಂತೆಮರಳ್ಳಿ ಮತ್ತು ಬಿಳಿಗಿರಿರಂಗನ ಬೆಟ್ಟದ ಬಸ್ ನಿಲ್ದಾಣಗಳನ್ನು ನಿರ್ಮಿಸುವ ಪ್ರಸ್ತಾವನೆ ಕ.ರಾ.ರ.ಸಾ.ನಿಗಮದ ಮುಂದಿರುತ್ತದೆ.
ಆ)	ಬಂದಿದ್ದಲ್ಲಿ, ಸದರಿ ಬಸ್ ನಿಲ್ದಾಣಗಳ ನಿರ್ಮಾಣದ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಸದರಿ ಬಸ್ ನಿಲ್ದಾಣಗಳ ನಿರ್ಮಾಣಕ್ಕೆ ನಿವೇಶನಗಳನ್ನು ಕ.ರಾ.ರ.ಸಾ.ನಿಗಮಕ್ಕೆ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. **ಸಂತೇಮರಳ್ಳಿ ಗ್ರಾಮದಲ್ಲಿ** ನಿಗಮದ ಬಸ್ ನಿಲ್ದಾಣ ನಿರ್ಮಿಸುವ ಉದ್ದೇಶಕ್ಕಾಗಿ ಚಾಮರಾಜನಗರ ತಾಲ್ಲೂಕು ಸಂತೆಮರಳ್ಳಿ ಹೋಬಳಿ, ಸಂತೆಮರಳ್ಳಿ ಗ್ರಾಮಕ್ಕೆ ಸೇರಿದ ಸ.ನಂ.134/3ರ 1-00 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು ಕಾಯ್ದಿರಿಸಿ ಆದೇಶಿಸಿರುತ್ತಾರೆ ಹಾಗೂ ತಹಶೀಲ್ದಾರ್, ಚಾಮರಾಜನಗರ ತಾಲ್ಲೂಕು, ಇವರು 'ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ, ಇವರಿಗೆ ಕಾಯ್ದಿರಿಸಿದೆ' ಎಂಬುದಾಗಿ ಆರ್.ಟಿ.ಸಿ.ಯ ಕಾಲಂ.9ರಲ್ಲಿ ದಾಖಲಿಸಿರುತ್ತಾರೆ. ಸದರಿ ಜಮೀನು ಖಾಸಗಿ ವ್ಯಕ್ತಿಗಳಾದ ಶ್ರೀಮತಿ ಮರಮ್ಮ ಮತ್ತು ಇತರರಿಗೆ ಸೇರಿದೆ ಎಂಬುದಾಗಿ ಸದರಿಯವರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಯಳಂದೂರು ಇಲ್ಲಿ ಪ್ರಕರಣ ಸಂಖ್ಯೆ: 122/2019ರ ಮೂಲಕ ದಾವೆ ಹೂಡಿರುತ್ತಾರೆ. ಸದರಿ ಪ್ರಕರಣವು ವಿಚಾರಣೆ ಹಂತದಲ್ಲಿದ್ದು, ಪ್ರಕರಣ ಇತ್ಯರ್ಥವಾದ ನಂತರ ನಿಗಮವು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16, ದಿನಾಂಕ: 06.06.2015ರ ಪ್ರಕಾರ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಕ್ರಮ ಜರುಗಿಸಲಾಗುವುದು.
ಇ)	ಈ ಬಸ್ ನಿಲ್ದಾಣಗಳ ನಿರ್ಮಾಣಕ್ಕೆ ಅಗತ್ಯವಾದ ನಿವೇಶನವನ್ನು ಇಲಾಖೆಯ ವಶಕ್ಕೆ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	
ಈ)	2021-22ನೇ ಸಾಲಿನಲ್ಲಿ ಈ ಬಸ್ ನಿಲ್ದಾಣಗಳ ನಿರ್ಮಾಣಕ್ಕೆ ಅಗತ್ಯವಾದ ಅನುದಾನವನ್ನು ಮಂಜೂರು ಮಾಡಲಾಗುವುದೇ? (ವಿವರ ನೀಡುವುದು)	

		ಯಳಂದೂರು ತಾಲ್ಲೂಕು ಅಗರ ಹೋಬಳಿ ಬಿಳಿಗಿರಿರಂಗನಬೆಟ್ಟ ಗ್ರಾಮದ ಸ.ನಂ.4/56ರಲ್ಲಿ ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯಕ್ಕೆ ಸೇರಿದ 87.20 ಎಕರೆ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ನಿಲ್ದಾಣ ನಿರ್ಮಿಸುವುದಕ್ಕೆ ಕಾಯ್ದಿರಿಸಿ ಆದೇಶವಾಗಿರುವ 0.24 ಎಕರೆ ಜಮೀನನ್ನು ನಿಗಮದ ಹೆಸರಿಗೆ ಆರ್.ಟಿ.ಸಿ.ಯಲ್ಲಿ ದಾಖಲಿಸಿ, ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ, ಇವರಿಗೆ ಭೌತಿಕವಾಗಿ ಹಸ್ತಾಂತರ ಮಾಡಿಸಿಕೊಡಬೇಕೆಂದು ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಇವರಲ್ಲಿ ಕೋರಲಾಗಿರುತ್ತದೆ. ಸದರಿ ನಿವೇಶನವು ನಿಗಮದ ಸ್ವಾಧೀನಕ್ಕೆ ಬಂದ ನಂತರ ಸಂಸ್ಥೆಯು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ದಿನಾಂಕ: 06.06.2015ರ ಪ್ರಕಾರ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಟಿಡಿ 139 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

9

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	3587
ಸದಸ್ಯರ ಹೆಸರು	ಶ್ರಿ ರಾಜೀವ್ ಪಿ. (ಕುಡಚಿ)
ಉತ್ತರಿಸಬೇಕಾದ ದಿನಾಂಕ	24.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯನ್ನು 2017-18ನೇ ಸಾಲಿನಿಂದ ಯಾವ ಉದ್ದೇಶಕ್ಕಾಗಿ ಜಾರಿಗೆ ತರಲಾಗಿದೆ;	ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯನ್ನು ಗ್ರಾಮಗಳ ಅಭಿವೃದ್ಧಿಗಾಗಿ ಜಾರಿಗೆ ತರಲಾಗಿದೆ.
ಆ.	ರಾಯಭಾಗ ತಾಲ್ಲೂಕು, ಕುಡಚಿ ಮತ ಕ್ಷೇತ್ರದಲ್ಲಿ ಯಾವ ಗ್ರಾಮಗಳನ್ನು ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ;	ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಕಡಚಿ ವಿಧಾನಸಭಾ ಕ್ಷೇತ್ರದಲ್ಲಿ ಕುಡಚಿ (ಗ್ರಾ) ಮತ್ತು ಬೆಕ್ಕೇರಿ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.
ಇ.	ಕೆಲಮೊಂದು ಗ್ರಾಮಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ತ್ವರಿತವಾಗಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೇ?	ಬಂದಿದೆ, ಈ ಯೋಜನೆಯಡಿ ಆಯ್ಕೆ ಮಾಡಿರುವ 991 ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಇದುವರೆಗೆ ರೂ.812.34 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ಬಾಕಿ ಇರುವ ರೂ.187.66 ಕೋಟಿಗಳನ್ನು ಈ ಸಾಲಿನಲ್ಲಿ ಸಂಪೂರ್ಣವಾಗಿ ಬಿಡುಗಡೆ ಮಾಡಿ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮವಹಿಸಬೇಕಿದೆ.

ಕಡತ ಸಂಖ್ಯೆ: ಗ್ರಾಅಪ:ಅಭಿ-15-9/36:ಆರ್‌ಆರ್‌ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3635
ಸದಸ್ಯರ ಹೆಸರು : ಡಾ॥ ಅನ್ನದಾನಿ ಕೆ. (ಮಳವಳ್ಳಿ)
ಉತ್ತರಿಸುವ ದಿನಾಂಕ : 24.03.2021
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖಾ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ವಿತರಿಸುವ ಆಹಾರದ ಜೊತೆಗೆ ಮೊಟ್ಟೆಯನ್ನು ವಿತರಿಸುವ ಯೋಜನೆ ಸರ್ಕಾರದ ಮುಂದಿದೆಯೇ;	ರಾಜ್ಯದ ಎಲ್ಲಾ ಅಂಗನವಾಡಿ ಮಕ್ಕಳಿಗೆ 2017ನೇ ಜೂನ್ ತಿಂಗಳಿನಿಂದ ವಾರದಲ್ಲಿ ಎರಡು ದಿನ ಮೊಟ್ಟೆಯನ್ನು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ವಿತರಿಸಲಾಗುತ್ತಿದೆ. ಇದಲ್ಲದೇ, ಈ ಯೋಜನೆಯಡಿ ಈ ಕೆಳಕಂಡಂತೆ ಮೊಟ್ಟೆಯನ್ನು ವಿತರಿಸಲಾಗುತ್ತಿದೆ. 6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. 3 ರಿಂದ 6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. 5 ಹಿಂದುಳಿದ ಜಿಲ್ಲೆಗಳಾದ ಕಲ್ಬುರ್ಗಿ, ಬೀದರ್, ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳ 6 ತಿಂಗಳಿಂದ 3 ವರ್ಷದ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ರಿಂದ 6 ವರ್ಷದ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಕೋವಿಡ್–19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಪೂರಕ ಪೌಷ್ಠಿಕ ಆಹಾರದ ಜೊತೆ ಮೊಟ್ಟೆಗಳನ್ನೂ ಸಹ ಮಕ್ಕಳ ಮನೆಗೆ ನೀಡಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಮಕ್ಕಳಿಗೆ ಪ್ರೋಟೀನ್‌ಯುಕ್ತ ಮೊಟ್ಟೆ ವಿತರಿಸಲು ಇರುವ ತೊಡಕುಗಳೇನು;	ಮೊಟ್ಟೆಗಳನ್ನು ವಿತರಿಸಲಾಗುತ್ತಿದೆ.
ಇ)	ಆಹಾರದ ಜೊತೆ ಮೊಟ್ಟೆ ವಿತರಣೆಯನ್ನು ಯಾವಾಗ ಪ್ರಾರಂಭಿಸಲಾಗುವುದು?	

ಸಂ: ಮಮಇ 141 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	3608
ಸದಸ್ಯರ ಹೆಸರು	:	ಡಾ: ಭರತ್ ಶೆಟ್ಟಿ ವೈ.(ಮಂಗಳೂರು ನಗರ ಉತ್ತರ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.
ಉತ್ತರಿಸಬೇಕಾದ ದಿನಾಂಕ:	:	24-03-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಖಾಲಿ ಇರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಒಟ್ಟು ಹುದ್ದೆಗಳು ಎಷ್ಟು ;	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 2020-21ನೇ ಸಾಲಿನ ವೃಂದ ಮತ್ತು ನೇಮಕಾತಿ ನಿಯಮಾವಳಿಯ ವೃಂದ ಬಲದಂತೆ ರಾಜ್ಯದಲ್ಲಿ ಖಾಲಿ ಇರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿದೆ. ಮಂಜೂರು: 203 | ಭರ್ತಿ: 160 | ಖಾಲಿ: 43
ಆ)	ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹುದ್ದೆಗಳನ್ನು ತುಂಬಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;	ಇಲ್ಲ. 2018-19ನೇ ಸಾಲಿನಲ್ಲಿ ಕೆಪಿಎಸ್‌ಸಿ ಮೂಲಕ 52 ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಅಧಿಸೂಚನೆ ಸಂಖ್ಯೆ:**PSC 72-RTB 2016, Dated** 29.11.2018 ರನ್ವಯ ಅಧಿಸೂಚಿಸಲ್ಪಟ್ಟಿದ್ದು, ದಿನಾಂಕ:05.03.2019 ರಂದು 50 ಹುದ್ದೆಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ. ಉಳಿದ 2 ಹುದ್ದೆಗಳ ಹೆಚ್ಚುವರಿ ಪಟ್ಟಿ ಬಂದಿದ್ದು ನೇಮಕಾತಿ ಆದೇಶ ಹೊರಡಿಸುವ ಕ್ರಮ ಪ್ರಗತಿಯಲ್ಲಿದೆ.
ಇ)	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು;	ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: **FD141/FRC-20**, ದಿನಾಂಕ:07.09.2020ರ ಪತ್ರದಲ್ಲಿ ರಾಜ್ಯದಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರದ ವೆಚ್ಚದಲ್ಲಿ ಮಿತವ್ಯಯ ಪಾಲಿಸಲು ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ತಡೆ ಹಿಡಿಯಲು ಆದೇಶಿಸಲಾಗಿದ್ದು, ನಿಯಮ ಸಡಿಲಿಕೆಯಾದ ನಂತರ ನೇರ ನೇಮಕಾತಿಗೆ ನಿಯಮಾನುಸಾರ ಲೋಕಸೇವಾ ಆಯೋಗವನ್ನು ಸಮಾಲೋಚಿಸಿ ಕ್ರಮವಹಿಸಲಾಗುವುದು.
ಈ)	ಈ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಏನು; (ಮಾಹಿತಿ ನೀಡುವುದು)	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ನೇಮಕಾತಿ ವಿಧಾನದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯು ಎಂ.ಎಸ್.ಡಬ್ಲ್ಯೂ ಅಥವಾ ಗೃಹ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವೀಧರರಾಗಿರಬೇಕಾಗುತ್ತದೆ. **(Family Resource Management/Food Nutrition/Food Science and Nutrition/Human Development and Family relations/Human Development & Family Studies/ Human Development and Family relations/Child Development or Master of Science in Home Science or Master of Arts in Women studies or Master of Arts in Sociology from an University Established by law)**

ಉ)	ಮಂಗಳೂರಿನಲ್ಲಿ ಖಾಲಿ ಇರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹುದ್ದೆಗಳು ಎಷ್ಟು;	ಮಂಗಳೂರಿನಲ್ಲಿ ಖಾಲಿ ಇರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿದೆ. ಮಂಜೂರು | ಭರ್ತಿ | ಖಾಲಿ 07 | 04 | 03
ಊ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;	ದಿನಾಂಕ:07/09/2020ರ ಆರ್ಥಿಕ ಇಲಾಖೆಯ ನಿರ್ಭಂಧ ಆದೇಶ ಸಡಿಲಿಕೆ ನಂತರ ನಿಯಮಾನುಸಾರ ಭರ್ತಿಗೆ ಕ್ರಮ ವಹಿಸಲಾಗುವುದು.
ಎ)	ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಶೇಕಡ 60ರಷ್ಟು ಅಧೀಕ್ಷಕರು ದರ್ಜೆ-1 / ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು / ಅಧೀಕ್ಷಕರು ವೀಕ್ಷಣಾಲಯ, ಬಾಲಕರ ಬಾಲಮಂದಿರ ಇನ್ನು ಮುಂತಾದ ಗ್ರೂಪ್ "ಬಿ" ಇನ್ನು ಇತರೆ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಕನಿಷ್ಠ 03 ವರ್ಷಗಳ ಅರ್ಹತಾದಾಯಕ ಸೇವೆ ಪೂರೈಸಿರುವವರನ್ನು ಮುಂಬಡ್ತಿಗೆ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ 03 ವರ್ಷಗಳ ಕನಿಷ್ಠ ಅರ್ಹತಾದಾಯಕ ಸೇವೆ ಪೂರೈಸಿದ ಅಭ್ಯರ್ಥಿಗಳು ಲಭ್ಯವಿಲ್ಲದಿರುವುದರಿಂದ ಆಡಳಿತಾತ್ಮಕ ಹಿತದೃಷ್ಟಿಯ ಮೇರೆಗೆ ಅರ್ಹ ಗ್ರೂಪ್ "ಬಿ" ಅಧಿಕಾರಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿಟ್ಟು ಕೆಲಸ ನಿರ್ವಹಿಸಲಾಗುತ್ತಿದೆ.

ಸಂ. ಮಮಇ 113 ಎಸ್‌ಜೆಡಿ 2021

(ಶಶಿಕಲಾ ಅ.ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.

13

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	3527
ಸದಸ್ಯರ ಹೆಸರು	ಶ್ರೀ ಮಸಾಲ ಜಯರಾಮ್
ಉತ್ತರಿಸುವ ದಿನಾಂಕ	24/03/2021
ಉತ್ತರಿಸುವವರು	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ)	ತುರುವೇಕೆರೆ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆಯ ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ರೇಷ್ಮೆ ಬಿತ್ತನೆ ಕೋಠಿಯ ಘಟಕಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆ ವತಿಯಿಂದ ಯಾವುದೇ ರೇಷ್ಮೆ ಬಿತ್ತನೆ ಕೋಠಿಯ ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ.
ಆ)	ಸುಮಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ರೇಷ್ಮೆ ಬಿತ್ತನೆ ಕೋಠಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಉದ್ಭವಿಸುವುದಿಲ್ಲ
ಇ)	ಹಾಗಿದ್ದಲ್ಲಿ, ರೇಷ್ಮೆ ಬೆಳೆಯ ಮೇಲೆ ಅವಲಂಬಿತರಾಗಿರುವ ಬೆಳೆಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಯೋಜನೆಗಳಾವುವು;	ತುರುವೇಕೆರೆ ತಾಲ್ಲೂಕಿನಲ್ಲಿ ಪ್ರಸ್ತುತ ಶೇ.100 ರಷ್ಟು ದ್ವಿತಳಿ (ಶುದ್ಧ ಮತ್ತು ಸಂಕರಣ ಗೂಡು) ಉತ್ಪಾದಿಸಲಾಗುತ್ತಿದೆ. ರೇಷ್ಮೆ ಮೊಟ್ಟೆ ಪೂರೈಕೆಗಾಗಿ ಸರ್ಕಾರಿ ಮಾದರಿ ಬಿತ್ತನೆ ಕೋಠಿ, ತುಮಕೂರು, ಹಾಗೂ ಕೇಂದ್ರ ರೇಷ್ಮೆ ಮಂಡಳಿಯ "ಎನ್ಎಸ್ಎಸ್ಓ" ಸಂಸ್ಥೆಯ ಮುಖಾಂತರ ಬಿತ್ತನೆ ಮೊಟ್ಟೆ ಬೇಡಿಕೆಯನ್ನು ಪೂರೈಸಲಾಗುತ್ತಿದೆ. ರೇಷ್ಮೆ ಬೆಳೆಗಾರರಿಗೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಮಲ್ಲದೇವನಹಳ್ಳಿ ಚಾಕಿ ಸಾಕಾಣಿಕಾ ಕೇಂದ್ರವು ರೇಷ್ಮೆ ಹುಳುಗಳನ್ನು 2ನೇ ಹಂತದವರೆಗೆ ಸಾಕಾಣಿಕೆ ಮಾಡಿ ತಾಲ್ಲೂಕಿನ ರೇಷ್ಮೆ ಬೆಳೆಗಾರರಿಗೆ ಚಾಕಿ ಹುಳುಗಳನ್ನು ಪೂರೈಸುತ್ತಿದೆ.
ಈ)	ಸದರಿ ಯೋಜನೆಗಳನ್ನು ರೈತರಿಗೆ ತಲುಪಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ದ್ವಿತಳಿ ಚಾಕಿ ಹುಳುಗಳಿಗೆ ರೂ.1000/- ಪ್ರತಿ 100 ಮೊಟ್ಟೆಗೆ ಸಹಾಯಧನವನ್ನು "ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು" ಯೋಜನೆಯಡಿ ರೇಷ್ಮೆ ಬೆಳೆಗಾರರಿಗೆ ಒದಗಿಸಲಾಗುತ್ತಿದೆ. ಅರ್ಹ ಫಲಾನುಭವಿಗಳಿಗೆ ಜೇಷ್ಠತೆಯನ್ನಾಧರಿಸಿ ಕ್ಷೇತ್ರಮಟ್ಟದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಹಾಯಧನ/ ಪ್ರೋತ್ಸಾಹಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ DBT/ಖಜಾನೆ-2 ಮುಖಾಂತರ ನೇರವಾಗಿ ಜಮಾ ಮಾಡಲಾಗುತ್ತದೆ. ಹಾಗೂ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ರೇಷ್ಮೆ 85 ರೇಕೃವಿ 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಸದಸ್ಯರ ಹೆಸರು : ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ)
2. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3566
3. ಉತ್ತರಿಸಬೇಕಾದ ದಿನಾಂಕ : 24.03.2021
4. ಉತ್ತರಿಸುವ ಸಚಿವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಪಿ.ಆರ್.ಇ.ಡಿ. ಇಂಜಿನಿಯರಿಂಗ್ ವಿಭಾಗದಲ್ಲಿ ಕಿರಿಯ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರುಗಳ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಈಗಾಗಲೇ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಮಂಜೂರಾಗಿರುವ ಸಹಾಯಕ ಇಂಜಿನಿಯರ್ ಹಾಗೂ ಕಿರಿಯ ಇಂಜಿನಿಯರ್ ವೃಂದದಲ್ಲಿ ಈ ಕೆಳಕಂಡಂತೆ ಭರ್ತಿ ಮಾಡಲಾಗಿದೆ.
<table>
<tr><th rowspan="2">ಕ್ರ. ಸಂ</th><th rowspan="2">ವೃಂದ</th><th rowspan="2">ಮಂಜೂರಾದ ಹುದ್ದೆಗಳು</th><th colspan="2">ಭರ್ತಿ ಮಾಡಲಾದ ಹುದ್ದೆಗಳು</th><th rowspan="2">ಖಾಲಿ ಹುದ್ದೆಗಳು</th></tr>
<tr><th>ನೇರ ನೇಮಕಾತಿ</th><th>ಶಾಶ್ವತ ವಿಲೀನಾತಿ</th></tr>
<tr><td>1.</td><td>ಸಹಾಯಕ ಇಂಜಿನಿಯರ್</td><td>256</td><td>147</td><td>**32** (ಸಹಾಯಕ ಇಂಜಿನಿಯರ್ (ವಿ-1))
48 (ಸಹಾಯಕ ಇಂಜಿನಿಯರ್ (ವಿ-2))</td><td>29</td></tr>
<tr><td>2.</td><td>ಕಿರಿಯ ಇಂಜಿನಿಯರ್</td><td>568</td><td>472</td><td>61</td><td>35</td></tr>
</table>
ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 09 ಸೇಶಿಕಾ 2020, ದಿನಾಂಕ: 08.12.2020 ರನ್ವಯ ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ಒಟ್ಟು 141 ಸಹಾಯಕ ಇಂಜಿನಿಯರ್ ಹಾಗೂ ಕಿರಿಯ ಇಂಜಿನಿಯರ್‌ಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಂಡಿರುತ್ತಾರೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೇಮಕಗೊಂಡಿರುವ ಹಾಗೂ ಶಾಶ್ವತವಾಗಿ ವಿಲೀನಾತಿಗೊಂಡಿರುವ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್‌ಗಳ ಪೈಕಿ ಕೆಲವರನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಗಳಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ನಿಯೋಜಿಸಿರುವುದರಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್‌ಗಳು ಖಾಲಿ ಇರುತ್ತವೆ</td></tr>
<tr><td>ಆ)</td><td>ಬಂದಿದ್ದಲ್ಲಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತ್ ವಿಭಾಗಗಳಲ್ಲಿ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿರುವುದರಿಂದ ಖಾಲಿಯಿರುವ ಎಲ್ಲಾ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td><td>ಮೇಲಿನ (ಅ) ದಲ್ಲಿ ತಿಳಿಸಿರುವಂತೆ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಖಾಲಿ ಇರುವ ಹುದ್ದೆಗಳಿಗೆ ಹೆಚ್ಚಿನ ಪ್ರಭಾರದಲ್ಲಿರಿಸಿ ಅಡಚಣೆಯಾಗದಂತೆ ಕೆಲಸ ನಿರ್ವಹಿಸಲಾಗುತ್ತಿದೆ. ಅಲ್ಲದೇ ಆರ್ಥಿಕ ಇಲಾಖೆಯ ಸಹಮತಿ ಪಡೆದು ಖಾಲಿ ಇರುವ ಹುದ್ದೆಗಳ ಭರ್ತಿ ಬಗ್ಗೆ ಪ್ರಸ್ತಾವನೆ ಇದೆ.</td></tr>
</table>

(ಕೆ.ಎಸ್.ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು